**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.**

ಪಿ.ಸಿ.ಆರ್ ನಂಃ 173/2025

ಸಿ ಡಬ್ಲುಃ 01

| | |
|---|---|
| ಸಾಕ್ಷಿದಾರರ ಹೆಸರು | ನಾಗರಾಜ ಕಟ್ಟಿಮನಿ |
| ತಂದೆಯ ಹೆಸರು | ವೆಂಕಪ್ಪ |
| ವಯಸ್ಸು | 52 ವರ್ಷ |
| ಉದ್ಯೋಗ | ಸಿವಿಲ್ ಗುತ್ತಿಗೆದಾರ |
| ವಾಸ್ತವ್ಯ | ಕೊಡಂಬಿ , ತಾಲೂಕು ಮುಂಡಗೋಡ. |

ಸಾಕ್ಷಿಯನ್ನು ದಿನಾಂಕ **12.09.2025** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು ದೂರನ್ನು ಆರೋಪಿತರಾದ ಯಲ್ಲಪ್ಪ ಫಕೀರಪ್ಪ ಹೊಸಮನಿ ಮತ್ತು ಸುಮಂಗಲಾ ಯಲ್ಲಪ್ಪ ಹೊಸಮನಿ ಇವರ ವಿರುದ್ಧ ಪ್ರಕರಣವನ್ನು ದಾಖಲು ಮಾಡಿದ್ದೇನೆ. ಸದರಿಯವರು ಗಂಡ ಹೆಂಡತಿ ಆಗಿರುತ್ತಾರೆ. ನಾನು ಸುಮಾರು 25 ವರ್ಷಗಳಿಂದ ಸಿವಿಲ್ ಕಾಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಿದ್ದು, ರಸ್ತೆ ನೀರು ಮತ್ತು ಗಟ್ಟದ ಕೆಳಗೆ ಕೆಲಸ ಮಾಡುತ್ತೇನೆ. ಆರೋಪಿಯು ಸೆಂಟ್ರಿಂಗ್ ಕಾಮಗಾರಿಗಳನ್ನು ಮಾಡುತ್ತಾನೆ. ಆರೋಪಿಯು ನನ್ನಿಂದ ಬೇರೆ ಬೇರೆ ದಿನಾಂಕಗಳಂದು 55,000/- ಸಾವಿರ ರೂಪಾಯಿಗಳನ್ನು ಮುಂಗಡ ಹಣವೆಂದು ಪಡೆದುಕೊಂಡಿರುತ್ತಾನೆ. ನನಗೆ ತಾರೀಖುಗಳು ನಿಖರವಾಗಿ ನೆನಪಿಲ್ಲ, ಆದರೆ ಫೋನ್ ಪೇ ಮೂಲಕ ಆರೋಪಿಗೆ ಹಣವನ್ನು ಕಳುಹಿಸಿರುತ್ತೇನೆ. ಆರೋಪಿಯು ನನ್ನೊಂದಿಗೆ ಕೆಲಸಕ್ಕೆ ಬಂದಿದ್ದು ಇರುವುದಿಲ್ಲ. ಆರೋಪಿಯು ಸೆಂಟ್ರಿಂಗ್ ಮತ್ತು ಬಾರಬೆಂಡಿಂಗ್ ಕೆಲಸ ಮಾಡುವವನಾಗಿದ್ದು, ಬೋರವೇಲ್ ಟ್ಯಾಂಕ್ ನಿರ್ಮಾಣ ಮಾಡುತ್ತೇನೆಂದು ನನ್ನ ಬಳಿಯಿಂದ ಗುತ್ತಿಗೆಯನ್ನು ಪಡೆದುಕೊಂಡು, ನನ್ನ ಬಳಿ ಈ ಮೇಲೆ ಹೇಳಿದಂತೆ ದುಡ್ಡನ್ನು ಪಡೆದುಕೊಂಡು ಕೆಲಸಕ್ಕೆ ಬಂದಿದ್ದು ಇರುವುದಿಲ್ಲ. ತನ್ನ ಮೊಬೈಲ್ ನ್ನು ಸ್ವಿಚ್ ಆಫ್ ಮಾಡಿಕೊಂಡಿರುತ್ತಾನೆ. ಆರೋಪಿಯ ಮೂಲತಃ ಊರಿಗೆ ಸಂಪರ್ಕ ಮಾಡಿದ್ದು , ಅವನು ಅಲ್ಲಿ ಸಿಕ್ಕಿರುವುದಿಲ್ಲ. ಸುಮಾರು 1 ವರ್ಷದ ನಂತರ, ಆರೋಪಿಯು ತನ್ನ ಹೆಂಡತಿ ಮನೆ ಇರುವ ಹನುಮಾಪುರದಲ್ಲಿ ವಾಸವಾಗಿದ್ದಾನೆಂದು ನನಗೆ ತಿಳಿದು ಬಂದಿದ್ದು, ಅಲ್ಲಿಗೆ ಹೋಗಿ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದಾಗ, ಆರೋಪಿಯು ತನಗೆ ಸಮಯ ಬೇಕೆಂದು ಕೇಳಿರುತ್ತಾನೆ. ಅದಾದ ನಂತರ ಆರೋಪಿಯೇ ನನ್ನ ವಿರುದ್ಧವೇ ಸುಳ್ಳು ದೂರನ್ನು ದಾಖಲು ಮಾಡಿರುತ್ತಾನೆ.

2025 ನೇ ಸಾಲಿನಲ್ಲಿ ಜುಲೈ 15 ನೇ ತಾರೀಖಿಗೆ ಪಾಳಾ ಕ್ರಾಸ್ ಭದ್ರಾಪುರ ಗ್ರಾಮದ ಡಾಬಾದ ಹತ್ತಿರ ನಾನು ನಿಂತುಕೊಂಡಾಗ, 1 ಮತ್ತು 2 ನೇ ಆರೋಪಿತರು ಬರುವುದನ್ನು ನೋಡಿ , ನಾನು 1 ನೇ ಆರೋಪಿಯ ಬಳಿ ಹಣವನ್ನು ವಾಪಸ್ಸು ಕೊಡುವಂತೆ ಕೇಳಿದಾಗ, 1 ನೇ ಆರೋಪಿಯು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ , ನನ್ನ ಮೇಲೆ ಹಲ್ಲೆ ಮಾಡಿರುತ್ತಾನೆ, ಆಗ ಸಮಯ ಮಧ್ಯಾಹ್ನ 3.30 ಗಂಟೆ ಆಗಿರುತ್ತದೆ. 1 ನೇ ಆರೋಪಿಯ ತನ್ನ ಕಿಸೆಯಲ್ಲಿದ್ದ ಚಾಕುವನ್ನು ತೆಗೆದು ನನಗೆ ಚುಚ್ಚಲು ಪ್ರಯತ್ನಿಸಿರುತ್ತಾನೆ. 2 ನೇ ಆರೋಪಿತಳೂ ಸಹ ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ , ನನ್ನ ಬೆನ್ನಿಗೆ ಹೊಡೆದು, ಆಗ ಅಲ್ಲಿದ್ದ ಜನರು ಬಂದು ನನ್ನನ್ನು ಅವರಿಂದ ಬಿಡಿಸಿದರು. ಸದರಿ

ಸಮಯಕ್ಕೆ ಆರೋಪಿತರು ನನ್ನ ಬಟ್ಟೆಯನ್ನು ಹರಿದಿರುತ್ತಾರೆ. ಸ್ಥಳದಲ್ಲಿ ಅಣ್ಣಪ್ಪ ಮತ್ತು ಸಿದ್ದಪ್ಪ ಮತ್ತು ಇತರರು ಇದ್ದರು. ಅವರು ನನ್ನನ್ನು ಬಿಡಿಸಿರುತ್ತಾರೆ. ನಾನು ಖಾಸಗಿ ಆಸ್ಪತ್ರೆಯಲ್ಲಿ ಉಪಚಾರ ಪಡೆದುಕೊಂಡೆನು.

ದಿನಾಂಕಃ 16.07.2025 ರಂದು ನಾನು ಠಾಣೆಗೆ ದೂರನ್ನು ಕೊಡಲು ಹೋದಾಗ , ಮೇಲಾಧಿಕಾರಿಗಳು ಠಾಣೆಯಲ್ಲಿ ಇರಲಿಲ್ಲ. ನಂತರ, ಅವರನ್ನು ಸಂಪರ್ಕಿಸಿದಾಗ, ಇದು ಹಣಕಾಸಿನ ವ್ಯವಹಾರವಾದ ಕಾರಣ , ನ್ಯಾಯಾಲಯಕ್ಕೆ ಹೋಗುವಂತೆ ಹೇಳಿ ನನ್ನ ದೂರನ್ನು ಸ್ವೀಕರಿಸಿದ್ದು ಇರುವುದಿಲ್ಲ. ನನ್ನನ್ನು ವಿಚಾರಣೆಯು ಸಹ ಮಾಡಿದ್ದು ಇರುವುದಿಲ್ಲ. ನಾನು ದೂರನ್ನು ನೀಡಿದ ಬಗ್ಗೆ ಪೋಲಿಸರಿಂದ ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ ಮತ್ತು ಎಸ್.ಪಿ ರವರಿಗೆ ದೂರಿನ ಪ್ರತಿಯನ್ನು ಕಳುಹಿಸಿರುತ್ತೇನೆ. ಪೋಲಿಸರು ಯಾವುದೇ ಕ್ರಮವನ್ನು ಜರುಗಿಸದ ಕಾರಣ , ನಾನು ಖಾಸಗಿ ಪಿರ್ಯಾದಿಯನ್ನು ದಾಖಲು ಮಾಡಿರುತ್ತೇನೆ. ನನಗೆ ಅನ್ಯಾಯ ಮತ್ತು ಅವಮಾನವಾಗಿದ್ದು, ನ್ಯಾಯ ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ನಾನು ನೀಡಿದ ಪಿರ್ಯಾದಿಗೆ ಪ್ರತಿಯನ್ನು ನೋಡುತ್ತಿದ್ದು ಅದನ್ನು ಗುರುತಿಸುತೇನೆ , ಅದನ್ನು **ನಿಸಿ.1** ಎಂದು ಗುರುತಿಸಲಾಯಿತು. ಎಸ್.ಪಿ ರವರಿಗೆ ಕಳುಹಿಸಿದ ಪಿರ್ಯಾದಿಯ ಪ್ರತಿಯನ್ನು ನೋಡುತ್ತಿದ್ದು ಅದನ್ನು ಗುರುತಿಸುತೇನೆ , ಅದನ್ನು **ನಿಸಿ.2** ಎಂದು ಗುರುತಿಸಲಾಯಿತು. ಎರಡು ಅಂಚೆ ರಶೀದಿಗಳನ್ನು ನೋಡುತ್ತಿದ್ದು ಅವುಗನ್ನು ಗುರುತಿಸುತೇನೆ , ಅವುಗಳನ್ನು ಒಟ್ಟಾಗಿ **ನಿಸಿ.3** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆಗೆ ಪಿರ್ಯಾದಿ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

**Sd/-**

**ಪ್ರ ದ ನ್ಯಾದಂ ಮುಂಡಗೋಡ.**